# ಅಜೆಂಡಾ ಗೆಲ್ಲಲಿಲ್ಲ, ಹಾಸ್ಯ ಗೆದ್ದಿತು

ಕಾಮಾಕ್ಯ ನಾರಾಯಣ ಸಿಂಗ್ ನಿರ್ದೇಶಿಸಿದ್ದ 'ಕೇರಳ ಸ್ಟೋರಿ 2' ಸಿನಿಮಾ ತನ್ನ ಅಗ್ಗದ ಅಜೆಂಡಾ ಕಾರಣದಿಂದ ಬಾಕ್ಸ್‌ಆಫೀಸ್‌ನಲ್ಲಿ ಸೊರಗಿತು. ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಸೇರಿ ಅನೇಕರು ಈ ಸಿನಿಮಾ ತೋರಿಸಿರುವ ಕೇರಳಿಗರ ಆತ್ಮದ ಕುರಿತು ಟೀಕೆ ವ್ಯಕ್ತಪಡಿಸಿದ್ದರು. ಸಿನಿಮಾಗೆ ಸೆನ್ಸಾರ್ ಮಂಡಳಿ ಪ್ರಮಾಣಪತ್ರ ನೀಡಿದ್ದನ್ನು ಪ್ರಶ್ನಿಸಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಲಾಗಿತ್ತು. ಬಿಡುಗಡೆಗೆ ಮೊದಲು ಅಷ್ಟೆಲ್ಲ ಸುದ್ದಿಯಲ್ಲಿದ್ದ ಚಿತ್ರವು ಆಮೇಲೆ ₹45 ಕೋಟಿ ಗಳಿಸಲು ಮಾತ್ರ ಶಕ್ಯವಾಯಿತು. ₹28 ಕೋಟಿ ಬಜೆಟ್‌ನಲ್ಲಿ ತಯಾರಾದ ಸಿನಿಮಾ ಇದು. ಅದೇ ಸಂದರ್ಭದಲ್ಲಿ ತಮಿಳಿನಲ್ಲಿ ಶಿವಕುಮಾರ್ ಮುರುಗೇಶನ್ ಎಂಬುವರು ನಿರ್ದೇಶಿಸಿದ 'ತಾಯ್ ಕಿಳವಿ' ಎಂಬೊಂದು ಚಿತ್ರ ತೆರೆಕಂಡಿತ್ತು. ಶಿವಕಾರ್ತಿಕೇಯನ್ ನಿರ್ಮಾಣ ಸಂಸ್ಥೆಯು ಈ ಸಿನಿಮಾ ಮೇಲೆ ಹೂಡಿದ್ದು ಕೇವಲ ₹10 ಕೋಟಿ. ಸಿನಿಮಾ ಎರಡು ವಾರಗಳಲ್ಲಿ ₹50 ಕೋಟಿಗೂ ಹೆಚ್ಚು ಹಣ ಸಂಗ್ರಹ ಮಾಡಿತು. ರಾಧಿಕಾ ಶರತ್ ಕುಮಾರ್ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದ ಈ ಹಾಸ್ಯ ಚಿತ್ರವನ್ನು ಕೆಲವರು ಮೆಚ್ಚಿಕೊಂಡರು.

ಬಲವಂತವಾಗಿ ಅಜೆಂಡಾ ಹೇರುವ ಹಿಂದಿ ಸಿನಿಮಾಗಿಂತ ಕಚಗುಳಿ ಇಡುವ ತಮಿಳು ಚಿತ್ರವು ಉತ್ತಮ ಗಳಿಕೆ ಕಂಡಿರುವುದನ್ನು ಹೋಲಿಸಿ ಅನೇಕರು ಸಾಮಾಜಿಕ ಮಾಧ್ಯಮದಲ್ಲಿ ಆಸಕ್ತಿಕರ ವಿಶ್ಲೇಷಣೆಗಳನ್ನೂ ಮಾಡಿದ್ದಾರೆ. ■






# ಪ್ರೀಮಿಯರ್ ಶೋ ಮಾರುಕಟ್ಟೆಯ ಮಾಯಾಜಾಲ

ಕಳೆದ ವರ್ಷ ಪವನ್ ಕಲ್ಯಾಣ್ ಅಭಿನಯಿಸಿದ್ದ 'ಒಜಿ' ತೆಲುಗು ಚಿತ್ರಕ್ಕೆ ಮೊದಲು ಕೆಲವು ಪ್ರೀಮಿಯರ್ ಶೋ ಬುಕಿಂಗ್ ಮಾಡಲು ಅವಕಾಶ ಕಲ್ಪಿಸಲಾಗಿತ್ತು. ಅಂದರೆ, ಮೊದಲ ದಿನದ ಶೋಗಳಿಗೆ ಮಾತ್ರ ಮುಂಗಡ ಟಿಕೆಟ್ ಕಾಯ್ದಿರಿಸುವ ಅವಕಾಶ. ಅದೊಂದು ಅಪರೂಪದ ಮಾರುಕಟ್ಟೆ ತಂತ್ರವಾಗಿತ್ತು. ಮುಂದಿನ ಎರಡು ಮೂರು ದಿನಗಳಿಗೂ ಟಿಕೆಟ್ ಕಾಯ್ದಿರಿಸುವ ಅವಕಾಶ ಕಲ್ಪಿಸುವುದು ಅದುವರೆಗೆ ಬಹುತೇಕ ಚಾಲ್ತಿಯಲ್ಲಿ ಇದ್ದ ಕ್ರಮ. ಅದನ್ನು ಮುರಿದ ಪರಿಣಾಮ ಒಟ್ಟು ₹25 ಕೋಟಿ ಹಣವನ್ನು ಪ್ರೀಮಿಯರ್ ಶೋಗಳಿಂದಲೇ ಸಿನಿಮಾ ಬಾಚಿಹಾಕಿತ್ತು. ಹಿಂದಿಯ 'ಧುರಂಧರ್ 2' ಅದೇ ಹಾದಿಯಲ್ಲಿ ಸಾಗಿತು. ಮಾರ್ಚ್ 18ನೇ ತಾರೀಕಿನ ಪ್ರದರ್ಶನಗಳ ಟಿಕೆಟ್ ಮಾತ್ರ ಪ್ರೀಮಿಯರ್ ಶೋ ಹೆಸರಿನಲ್ಲಿ ಮುಂಗಡ ಕಾಯ್ದಿರಿಸುವಿಕೆಗೆ ಲಭ್ಯವಿತ್ತು. ಇದರಿಂದ ದೇಸಿ ಹಾಗೂ ವಿದೇಶಿ ಮಾರುಕಟ್ಟೆಗಳಲ್ಲಿ ಸಿನಿಮಾ ₹60 ಕೋಟಿಗೂ ಹೆಚ್ಚು ಹಣ ಗಳಿಸಿದಂತಾಗಿದೆ. ಭಾರತದ ಚಿತ್ರವೊಂದು ಬಿಡುಗಡೆಗೆ ಮೊದಲೇ ಪ್ರೀಮಿಯರ್ ಶೋ ಹೆಸರಿನಲ್ಲಿ ಇಷ್ಟೊಂದು ಹಣ ಗಳಿಸಿದ ಉದಾಹರಣೆ ಇದುವರೆಗೆ ಇರಲಿಲ್ಲ. ಬೆಂಗಳೂರು ಒಂದರಲ್ಲೇ ಈ ಸಿನಿಮಾ ಪ್ರೀಮಿಯರ್ ಶೋ ಟಿಕೆಟ್ ಬೆಲೆ ₹300ರಿಂದ ₹1700ವರೆಗೆ ಇತ್ತು. ಗೋಲ್ಡ್ ಕ್ಲಾಸ್ ಶೋಗಳಂತೂ ಟಿಕೆಟ್ ದರ ದುಬಾರಿ ಇದ್ದರೂ ಬೇಗ ಭರ್ತಿಯಾಗಲು ಬುಕ್ ಆದವು. ಉತ್ತರ ಅಮೆರಿಕದಲ್ಲಿ 'ಧುರಂಧರ್ 2' ಸಿನಿಮಾದ ವಾರಾಂತ್ಯದ ಶೋಗಳ ಟಿಕೆಟ್ ಮಾರಾಟವು ಸುಮಾರು ₹27 ಕೋಟಿ ತಂದಿತ್ತಿದೆ.

ಬಿಡುಗಡೆ ದಿನಾಂಕಕ್ಕೆ ಆರು ದಿನ ಮೊದಲೇ ಪ್ರೀಮಿಯರ್ ಶೋಗಳಿಂದ ಇಷ್ಟು ಹಣ ಬಾಚಿರುವ ಸಿನಿಮಾ, ಮೊದಲ ಮೂರು ದಿನಗಳಲ್ಲೇ ₹100 ಕೋಟಿ ಗಡಿ ದಾಟುವ ಸಾಧ್ಯತೆ ಇದೆ. ಚಿತ್ರದ ಮೊದಲ ಭಾಗವು ಕಳೆದ ವರ್ಷ ಡಿಸೆಂಬರ್‌ನಲ್ಲಿ ತೆರೆಕಂಡಿತ್ತು. ₹1300 ಕೋಟಿಗೂ ಹೆಚ್ಚು ಹಣವನ್ನು ಅದು ಗಳಿಸಿರುವುದು ವಿಶೇಷ. ಈಗ ಮತ್ತೆ ಮೊದಲ ಭಾಗವನ್ನೂ ಭಾರತದ 250 ಪರದೆಗಳಲ್ಲಿ ಮರುಬಿಡುಗಡೆ ಮಾಡಲಾಗುತ್ತಿದೆ.

ಒಂದೇ ಚಿತ್ರವನ್ನು ಕೇವಲ ನಾಲ್ಕು ತಿಂಗಳ ಅವಧಿಯಲ್ಲಿ ಹೇಗೆ ಮಾರ್ಕೆಟಿಂಗ್ ಮಾಡಬಹುದು ಎಂಬುದರ ಪ್ರಾತ್ಯಕ್ಷಿಕೆ ಇದು. ಆದಿತ್ಯ ಧರ್ ನಿರ್ದೇಶನದ 'ಧುರಂಧರ್ 2' ಸಿನಿಮಾದಲ್ಲಿ ರಣವೀರ್ ಸಿಂಗ್ ನಾಯಕ. ಪ್ರತಿನಾಯಕನಾಗಿ ಅಕ್ಷಯ್ ಖನ್ನಾ ಮೊದಲ ಭಾಗದಲ್ಲಿ ಹೆಚ್ಚು ಜನಪ್ರಿಯತೆ ಗಳಿಸಿದ್ದರು. ಸಂಜಯ್ ದತ್, ಅರ್ಜುನ್ ರಾಂಪಾಲ್, ಮಾಧವನ್ ಪ್ರಮುಖ ಪಾತ್ರಗಳಲ್ಲಿ ನಟಿಸಿರುವ ಈ ಚಿತ್ರಕ್ಕೆ ಶಾಶ್ವತ್ ಸಚ್ದೇವ್ ಸ್ವರ ಸಂಯೋಜಿಸಿರುವ ಗೀತೆಗಳು ಇಂಧನವಾಗಿ ಒದಗಿಬಂದಿವೆ. ■